"ಮಧುರ ಮಕ್ಕಳೇ - ತಂದೆಯಿಂದ ನಿಮಗೆ ಶ್ರೇಷ್ಠ ಮತ ಸಿಕ್ಕಿದೆ, ಈಗ ನಿಮ್ಮ ಬುದ್ಧಿ ಬೀಗ ತೆರೆಯಲ್ಪಟ್ಟಿದೆ, ಆದುದರಿಂದ ಸರ್ವರಿಗೂ ತಮ್ಮ ಬುದ್ಧಿಯ ಸಹಯೋಗವನ್ನು ಕೊಡುವುದೇ ನಿಮ್ಮ ಕರ್ತವ್ಯ ಆಗಿದೆ"

ಪ್ರಶ್ನೆ: ಸಂಗಮಯುಗದಲ್ಲಿ ಮಕ್ಕಳ ಆಂತರ್ಯದಲ್ಲಿ ಯಾವ ಆಸೆ ಉತ್ಪನ್ನವಾಗುತ್ತದೆ, ಅದನ್ನು ತಂದೆಯೇ ಪೂರ್ಣ ಮಾಡುತ್ತಾರೆ?

ಉತ್ತರ: ಸಂಗಮದಲ್ಲಿ ಮಕ್ಕಳಿಗೆ ಸ್ವರ್ಗದಲ್ಲಿ ಹೋಗುವ ಆಸೆ ಉತ್ಪನ್ನವಾಗುತ್ತದೆ. ಮೊದಲು ಎಂದಿಗೂ ನಾವು ಸ್ವರ್ಗದಲ್ಲಿ ಹೋಗುತ್ತೇವೆಂದು ಯೋಚಿಸಿರಲಿಲ್ಲ, ಈಗ ಈ ಹೊಸ ಆಸೆಯು ಉತ್ಪನ್ನವಾಗಿದೆ. ಈ ಆಸೆಯನ್ನು ತಂದೆಯೇ ಪೂರ್ಣ ಮಾಡುತ್ತಾರೆ, ಆಸೆ ಪೂರ್ಣವಾದ ನಂತರ ಬೇರೆ ಯಾವ ಆಸೆಯೂ ಇರುವುದಿಲ್ಲ. ದೇವತೆಗಳ ಖಜಾನೆಯಲ್ಲಿ ಅಪ್ರಾಪ್ತಿ ಎಂಬ ವಸ್ತುವಿಲ್ಲ ಎಂಬ ಗಾಯನವಿದೆ.

ಗೀತೆ: ಕೊನೆಗೂ ಆ ದಿನ ಇಂದು ಬಂದಿತು...........

ಓಂ ಶಾಂತಿ. ಎಲ್ಲಾ ಭಕ್ತರಿಗಾಗಿ ಅಗತ್ಯವಾಗಿ ಯಾವುದಾದರೂ ಒಂದು ದಿನ ಬರಬೇಕಾಗುತ್ತದೆ. ಉಳಿದವರೆಲ್ಲರೂ ಸೀತೆಯರು, ಭಕ್ತಿಯರು, ಎಲ್ಲರೂ ದುಃಖಿಗಳಾಗಿದ್ದಾರೆ. ಭಗವಂತನನ್ನು ನೆನಪು ಮಾಡುತ್ತಾ, ಮಾಡುತ್ತಾ ಕೊನೆಗೂ ಭಗವಂತನೇ ಬಂದು ಕೈ ಹಿಡಿದುಕೊಳ್ಳುವ ಸಮಯ ಬರುತ್ತದೆ. ಅವರಿಗೆ ಅಂಬಿಗ, ತೋಟದ ಮಾಲೀಕ, ಪತಿತ ಪಾವನನೆಂದು ಕರೆಯಲಾಗುತ್ತದೆ. ಈಗ ನೀವು ಮಕ್ಕಳು ತಿಳಿದುಕೊಂಡಿದ್ದೀರಿ-ನಾವು ಒಬ್ಬ ತಂದೆಯ ಕೈಯನ್ನು ಹಿಡಿದುಕೊಂಡಿದ್ದೇವೆ. ನಾಸ್ತಿಕರಿಂದ ಆಸ್ತಿಕರಾಗಿದ್ದೇವೆ. ತಂದೆ ಮಕ್ಕಳಿಗೆ ತಮ್ಮ ಪರಿಚಯವನ್ನು ಕೊಟ್ಟು ಆಸ್ತಿಯನ್ನು ಕೊಡಲು ತಮ್ಮ ಮಕ್ಕಳನ್ನಾಗಿ ಮಾಡಿಕೊಂಡಿದ್ದಾರೆ. ತಂದೆಯಿಂದ ಆಸ್ತಿ ಸಿಗಬೇಕಲ್ಲವೆ! ಇವರು ಬೇಹದ್ದಿನ ತಂದೆ ಪರಮಪಿತ ಆಗಿದ್ದಾರೆ. ಆದುದರಿಂದ ಮಕ್ಕಳಾದ ಎಲ್ಲಾ ಭಕ್ತರು ಅವರನ್ನು ನೆನಪು ಮಾಡುತ್ತಾರೆ. ಆದರೆ ಈ ಮಾತನ್ನು ಭಕ್ತರು ತಿಳಿದುಕೊಂಡಿಲ್ಲ. ಎಷ್ಟೊಂದು ಆಕರ್ಷಣೆಯವಾಗಿ ತೀರ್ಥಯಾತ್ರೆಗಳಿಗೆ ಹೋಗುತ್ತಾರೆ. ಕುಂಭಮೇಳಗಳು ನಡೆಯುತ್ತವೆ. ವೇದಶಾಸ್ತ್ರಗಳನ್ನೂ ಸಹ ಓದುತ್ತಾರೆ. ಇದೆಲ್ಲವು ಭಕ್ತಿ ಮಾರ್ಗದ ಸಾಮಾಗ್ರಿಗಳಾಗಿವೆ. ಆದುದರಿಂದ ನಮ್ಮನ್ನು ದುರ್ಗತಿಯಿಂದ ಬಂದು ಬಿಡುಗಡೆ ಮಾಡಿ ಎಂದು ಭಗವಂತನನ್ನು ನೆನಪು ಮಾಡುತ್ತಾರೆ. ತಂದೆಯನ್ನು ಕೂಗುತ್ತಿರುತ್ತಾರೆ, ಆದರೆ ತಂದೆಯನ್ನು ಯಾರೂ ಸಹ ತಿಳಿದುಕೊಂಡಿಲ್ಲ. ಈ ರೀತಿ ಯಾರು ತಂದೆಯನ್ನು ತಿಳಿದುಕೊಂಡಿರುವುದಿಲ್ಲ, ಅಂತಹವರು ಮಕ್ಕಳೇ ಅಲ್ಲ. ತಂದೆಯನ್ನು ಅರಿಯದೆ ನಾಸ್ತಿಕರಾಗಿರುವ ಕಾರಣ ಈಗ ದುಃಖವೇ ದುಃಖವಿದೆ. ತಂದೆಯನ್ನು ತಿಳಿದುಕೊಳ್ಳುವುದರಿಂದ ಅಪಾರವಾದ ಸುಖ ಪ್ರಾಪ್ತಿಯಾಗುತ್ತದೆ. ತಂದೆ ಸ್ವರ್ಗದ ರಚಯಿತ ಆಗಿದ್ದಾರೆ, ಆದರೆ ಎಲ್ಲರೂ ಸ್ವರ್ಗದಲ್ಲಿ ಹೋಗಲು ಸಾಧ್ಯವಿಲ್ಲ. ತಂದೆಯಿಂದ ಆಸ್ತಿಯನ್ನು ಪಡೆಯಲು ನಿಗಧಿ ಸಂಖ್ಯೆಯಲ್ಲಿ ಮಾತ್ರ ಬರುತ್ತಾರೆ. ಎಲ್ಲಾ ಧರ್ಮದವರು ಕೇವಲ ಮುಕ್ತಿಯ ಆಸ್ತಿಯನ್ನು ಪಡೆಯಲು ಬರುತ್ತಾರೆ. ಎಲ್ಲರೂ ತಂದೆಯ ಮೂಲಕವೇ ಪಡೆಯಬೇಕು.

ನಾನು ನಿಮಗೆ ಸಹಜಕ್ಕಿಂತಲೂ ಸಹಜ ಮಾತನ್ನು ತಿಳಿಸಿಕೊಡುತ್ತೇನೆಂದು ತಂದೆ ಹೇಳುತ್ತಾರೆ. ಕೇವಲ ನನ್ನನ್ನು ನೆನಪು ಮಾಡಿ. ನೀವು ಐದು ಸಾವಿರ ವರ್ಷದ ಹಿಂದೆಯೂ ಸಹ ನನ್ನನ್ನು ಮಿಲನ ಮಾಡಿದ್ದಿರಿ. ಹೀಗೆ ಪ್ರತಿ ಐದು ಸಾವಿರ ವರ್ಷದ ನಂತರ ಮಿಲನ ಮಾಡುತ್ತಿರುತ್ತೇವೆ. ಇದೆಲ್ಲಾ ನನಗಾಗಿ ಹಳೆಯ ಮಾತುಗಳಾಗಿವೆ. ಕಲ್ಪ-ಕಲ್ಪ ನೀವು ರಾಜ್ಯವನ್ನು ಕಳೆದುಕೊಂಡು ಪುನಃ ಪಡೆದುಕೊಳ್ಳುತ್ತೀರಿ. ನೀವು 84 ಜನ್ಮಗಳನ್ನು ತೆಗೆದುಕೊಳ್ಳುತ್ತೀರಿ. ಇದು ಅನೇಕ ಜನ್ಮಗಳ ಅಂತ್ಯದ ಜನ್ಮವಾಗಿದೆ. ನಾವು ಮೊದಲು ಕ್ಷೀರಸಾಗರದಲ್ಲಿದ್ದು ಈಗ ವಿಷಯ ಸಾಗರದಲ್ಲಿ ಬಂದು ತಲುಪಿದ್ದೀರಿ. ಆ ರೀತಿ ಕ್ಷೀರ ಸಾಗರವೇನೂ ಇಲ್ಲ. ಆದರೆ ಅವರು ಪಾವನರಾಗಿದ್ದು, ಪುನಃ ಮಾಯಾ ರಾವಣನು ಪತಿತರನ್ನಾಗಿ ಮಾಡಿದನು. ಈಗ ತಂದೆ ಮತ್ತೆ ಪಾವನ ಮಾಡಲು ಬಂದಿದ್ದಾರೆ. ಗೀತೆಯಲ್ಲೂ ಸಹ ಕೊನೆಗು ಆ ದಿನ ಇಂದು ಬಂದಿತೆಂದು ಹೇಳುತ್ತಾರೆ. ಭಕ್ತಿ ಮಾರ್ಗದಲ್ಲಿ ನಿಮಗೆ ಸ್ವರ್ಗದ ಮಾಲೀಕರಾಗುವ ಆಸೆ ಇರಲಿಲ್ಲ. ಸ್ವರ್ಗದಲ್ಲಿ ಹೋಗುತ್ತೇವೆಂಬ ಮಾತು ಬುದ್ಧಿಯಲ್ಲಿ ಇರಲಿಲ್ಲ. ಈ ಬ್ರಹ್ಮಾ ತಂದೆಯೂ ಸಹ ಬಹಳ ಗೀತೆಯನ್ನು ಓದುತ್ತಾ, ಕೇಳುತ್ತಿದ್ದರು. ಆದರೆ ನಾವು ರಾಜಯೋಗವನ್ನು ಕಲಿತು ನರನಿಂದ ನಾರಾಯಣನಾಗುತ್ತೇನೆಂಬ ಆಸೆ ಇರಲಿಲ್ಲ. ಅಕಸ್ಮಾತ್ ಇದ್ದಕ್ಕಿದ್ದಂತೆಯೇ ತಂದೆಯು ಬಂದು ಪ್ರವೇಶ ಮಾಡಿದರು. ನಾನು ಈಗ ನಿಮ್ಮ ಸ್ವರ್ಗದ ಆಸೆಯನ್ನು ಪೂರ್ಣ ಮಾಡಲು ಬಂದಿದ್ದೇನೆ ಎಂದು ತಂದೆ ತಿಳಿಸುತ್ತಾರೆ. ಈಗ ನೀವು ಸ್ವರ್ಗದಲ್ಲಿ ಹೋಗುವ ಆಸೆಯನ್ನು ಬುದ್ಧಿಯಲ್ಲಿ ಧಾರಣೆ ಮಾಡಿಕೊಳ್ಳಿ. ಸ್ವರ್ಗದ ರಚಯಿತ ತಂದೆ ಆಗಿದ್ದಾರೆ. ಅವರು ಬಹಳ ಸಹಜ ರೀತಿಯಲ್ಲಿ ಕುಳಿತು ತಿಳಿಸಿಕೊಡುತ್ತಾರೆ. ಹಾ! ಕಾಮ ಮಹಾಶತ್ರು ಎಂದು ಸನ್ಯಾಸಿಗಳೂ ಸಹ ಹೇಳುತ್ತಾರೆ. ಆದುದರಿಂದ ಅವರು ಮನೆ ಮಠವನ್ನು ಬಿಟ್ಟು ಬಿಡುತ್ತಾರೆ. ಇದು ಕೇವಲ ಕೆಲವರ ಮಾತಾಗಿದೆ. ಅವರ ನಿವೃತ್ತಿ ಮಾರ್ಗದ ಪಾತ್ರವೂ ಸಹ ನಾಟಕದಲ್ಲಿ ನಿಗಧಿಯಾಗಿದೆ. ಅದನ್ನೂ ಸಹ ಭಕ್ತಿ ಎಂದು ಕರೆಯಲಾಗುತ್ತದೆ. ಪರಮಪಿತ ಪರಮಾತ್ಮನೆಂದು ಹೇಳುತ್ತಾರೆ, ಆದರೆ ತಂದೆಯನ್ನು ತಿಳಿಯದ ಕಾರಣ ಮೂಡಮತಿ ಎಂದು

ಹೇಳಲಾಗುತ್ತದೆ. ಮತ್ತೆ ಭಜ ರಾಧೇ ಗೋವಿಂದ....... ಎಂದು ಹೇಳುತ್ತಾರೆ. ಭಜಿಸುವುದು ಯಾರನ್ನು? ಕೃಷ್ಣನ ಹೆಸರನ್ನು ಗೋವಿಂದ ಎಂದು ಕರೆಯುತ್ತಾರೆ. ಏನು ಕೇಳಿರುತ್ತಾರೆ ಅದನ್ನೇ ಹೇಳುತ್ತಿರುತ್ತಾರೆ. ಗೋವಿಂದ ಎಂದು ಯಾರಿಗೆ ಹೇಳುವುದು? ಗೋವುಗಳನ್ನು ಕಾಯುವವನು, ಮುರಳಿ ಹೇಳುವವರು ಒಬ್ಬ ತಂದೆಯೇ ಆಗಿದ್ದಾರೆ. ಇದು ಮಾನವರೆಂಬ ಹಸುಗಳ ಮಾತಾಗಿದೆ. ಮೊದಲು ನೀವೂ ಸಹ ಮೂಡಮತಿ ಆಗಿದ್ದು, ಏನನ್ನೂ ತಿಳಿದುಕೊಂಡಿರಲಿಲ್ಲ. ತಂದೆ ಬಂದು ಈಗ ಶ್ರೇಷ್ಠ ಮತವನ್ನು ನೀಡಿದ್ದಾರೆ. ಮಾಯಾ ರಾವಣ ಕುಮತವನ್ನು ಕೊಡುತ್ತಾನೆ. ತಂದೆ ಶ್ರೇಷ್ಠ ಮತವನ್ನು ಕೊಡುತ್ತಾರೆ. ಶ್ರೇಷ್ಠ ಮತವು ಶಿವ ತಂದೆಯ ಮತವಾಗಿದೆ. ಕುಮತವು ರಾವಣನ ಮತವಾಗಿದೆ. ಸುಮತ ಅರ್ಥಾತ್ ಶ್ರೇಷ್ಠ ಮತ, ಕುಮತ ಅರ್ಥಾತ್ ಅಸತ್ಯ ಮತವಾಗಿದೆ. ಈಗ ನೀವು ಇದರ ಅಂತರವನ್ನು ತಿಳಿದುಕೊಂಡಿದ್ದೀರಿ. ನಾವು ಅಸತ್ಯ ಮತದಲ್ಲಿ ಇದ್ದವರಿಗೆ ಸ್ವರ್ಗದ ಆಸೆಯೇನು ಇರಲಿಲ್ಲ. ಈಗ ತಂದೆ ಹೊಸ ಆಸೆಯನ್ನು ವ್ಯಕ್ತ ಪಡಿಸಿದ್ದಾರೆ. ಸ್ವರ್ಗದಲ್ಲಿ ಅಪ್ರಾಪ್ತಿಯ ಯಾವ ವಸ್ತು ಇಲ್ಲದ ಕಾರಣ ಶ್ರಮ ಪಡುವ ಆವಶ್ಯಕತೆ ಇರುವುದಿಲ್ಲ. ನಂಬರ್ವಾರ್ ಪುರುಷಾರ್ಥ ಮಾಡುತ್ತಿದ್ದರೂ ಸಹ ಈಗ ನಿಮ್ಮೆಲ್ಲರಿಗೂ ಹೊಸ ಆಸೆ ಇದೆ. ತಂದೆ ನಂಬರ್ವನ್ ಮತ ಕೊಡುತ್ತಾರಲ್ಲವೇ? ಬ್ರಹ್ಮಾ ಇಳಿದು ಬಂದರೂ ಸಹ ಬೇರೆ ಯಾರ ಮತವನ್ನು ಕೇಳುವುದಿಲ್ಲವೆಂದು ಹೇಳುತ್ತಾರೆ. ಇದು ಅಂತಿಮ ಸಮಯದ ಮಹಿಮೆಯಾಗಿದೆ. ಈ ಮಹಿಮೆ ನಿಮಗೆ ಅಂತಿಮದಲ್ಲಿ ಮಾಡಲ್ಪಡುವುದು. ಯಾವಾಗ ನೀವು ಸಂಪೂರ್ಣರಾಗುತ್ತೀರಿ ಆಗ ನಿಮ್ಮನ್ನು ವಾಹ್ ವಾಹ್ ಎಂದು ಹೊಗಳುತ್ತಾರೆ. ಈಗ ಇನ್ನೂ ಪುರುಷಾರ್ಥದಲ್ಲಿ ಅತ್ತಿ ಇಳಿಯುವುದನ್ನೇ ಮಾಡುತ್ತಿರುತ್ತಾರೆ. ಈಗೀಗ ಖುಷಿಯಲ್ಲಿ ನೃತ್ಯ ಮಾಡುತ್ತಾ, ಈಗೀಗ ದೇಹಾಭಿಮಾನದಲ್ಲಿ (ಶವದಂತೆ) ಬರುತ್ತಾರೆ. ಮಾಯೆ ಭಿನ್ನ-ಭಿನ್ನ ರೂಪದಲ್ಲಿ ಮೋಸ ಮಾಡುತ್ತದೆ. ಒಮ್ಮೊಮ್ಮೆ ಗೊಂದಲವಾಗಿ ಶ್ರೀಮತವನ್ನು ಬಿಟ್ಟು ರಾವಣನ ಮತದಂತೆ ನಡೆಯಲು ಆರಂಭಿಸಿ ನಂತರ ತಂದೆಯನ್ನು ಕೂಗುತ್ತಿರುತ್ತಾರೆ. ಆದುದರಿಂದ ಹೆಜ್ಜೆ ಹೆಜ್ಜೆಯಲ್ಲಿ ತಂದೆಯಿಂದ ಶಿಕ್ಷಣ ತೆಗೆದುಕೊಳ್ಳುತ್ತಿರಬೇಕೆಂದು ತಂದೆ ತಿಳಿಸುತ್ತಾರೆ. ಶ್ರೀಮತದಂತೆ ನಡೆಯುವದರಿಂದ ನಿಮ್ಮ ಕಲ್ಯಾಣವಾಗುತ್ತದೆ. ತಂದೆ ನಿಮ್ಮಲ್ಲಿ ಆಸೆ ವ್ಯಕ್ತ ಪಡೆಸಿದ್ದಾರಲ್ಲವೆ... ಶ್ರೀಮತದಂತೆ ನಡೆಯುವುದರಿಂದ ನೀವು ಈ ರೀತಿ ಲಕ್ಷ್ಮೀ-ನಾರಾಯಣರಾಗುತ್ತೀರಿ. ಹೇಗೆ ಈ ಬ್ರಹ್ಮಾ ತಂದೆ ಆಗಿದ್ದಾರೆ. ಅದೇ ರೀತಿ ನೀವೂ ಸಹ ಆಗಬಹುದೆಂಬ ಮಾತನ್ನು ಎಂದಿಗೂ ಮರೆಯಬೇಡಿ. ಆದರೆ ಮಾಯೆ ಶ್ರೀಮತವನ್ನು ತೆಗೆದುಕೊಳ್ಳಲು ಅವಕಾಶವೇ ಕೊಡುವುದಿಲ್ಲ. ಯಾವ ಕಡೆಯಿಂದಾದರೂ ಉಲ್ಟಾ ಕರ್ಮವನ್ನು ಮಾಡಿಸಿ ಬಿಡುತ್ತದೆ. ಆಮೇಲೆ ಅಂತ್ಯದಲ್ಲಿ ಬಂದು ಈ ರೀತಿ ಹೇಳುತ್ತಾರೆ-ಬಾಬಾ ನಾವು ಈ ಕೆಲಸವನ್ನು ಮಾಡಿಕೊಂಡು ನಿಮ್ಮಿಂದ ಮಾರ್ಗದರ್ಶನ ಪಡೆಯಲು ಸಮಯವೇ ಸಿಗಲಿಲ್ಲ, ಈಗ ಏನು ಮಾಡಲಿ ಮಾಯೆಯು ಬಹಳ ಪೆಟ್ಟನ್ನು ಕೊಡುತ್ತದೆ. ಈ ಮಾತಿನಲ್ಲಿ ತಂದೆಯೂ ಸಹ ಏನು ಮಾಡಲು ಸಾಧ್ಯ! ಪ್ರತೀ ಮಾತಿನಲ್ಲಿ ಹಾಗೂ ಹೆಜ್ಜೆ-ಹೆಜ್ಜೆಯಲ್ಲಿ ಎಚ್ಚರಿಕೆ ಇರಬೇಕು. ಸನ್ಯಾಸಿಗಳೆಂದಿಗೂ ಸ್ತ್ರೀ-ಪುರುಷರು ಜೊತೆಯಲ್ಲಿದ್ದು ಪವಿತ್ರವಾಗಿರಬಹುದೆಂದು ಹೇಳುವುದಿಲ್ಲ, ಅದಕ್ಕಾಗಿ ಬಹಳ ಯುಕ್ತಿಗಳು ಬೇಕಾಗುತ್ತದೆ. ಬ್ರಹ್ಮಾಕುಮಾರ-ಬ್ರಹ್ಮಾಕುಮಾರಿ ಎಂದು ಹೇಳಿಕೊಳ್ಳುವುದೂ ಸಹ ಎಷ್ಟೊಂದು ದೊಡ್ಡ ಯುಕ್ತಿಯಾಗಿದೆ. ನೀವು ಮಕ್ಕಳು ಬ್ರಾಹ್ಮಣ-ಬ್ರಾಹ್ಮಣಿಯರಾದ ಮೇಲೆ ಎಂದಿಗೂ ಕುಲಕ್ಕೆ ಕಳಂಕ ತರಬಾರದು. ಸಹೋದರ-ಸಹೋದರಿ ಸಂಬಂಧ ಎಂದಿಗೂ ಉಲ್ಟಾ ಆಗುವುದಿಲ್ಲ. ಸಹೋದರ-ಸಹೋದರಿ ಎಂದಿಗೂ ವಿವಾಹವಾಗುವುದಿಲ್ಲ. ಇಲ್ಲಿ ನಾವೆಲ್ಲರೂ ಸಹೋದರ-ಸಹೋದರಿಯರಾಗಿದ್ದೇವೆ. ಈ ಮಾತನ್ನು ಕೇಳಿ ಇದು ಎಲ್ಲಿಯ ಪದ್ಧತಿಯೆಂದು ಜನ ನಗುತ್ತಾರೆ. ಇದು ಹೊಸ ಮಾತಾಗಿದೆ. ಇಂತಹ ಸಲಹೆಯನ್ನು ಯಾರೂ ಸಹ ಕೊಡಲು ಸಾಧ್ಯವಿಲ್ಲ. ಯಾರಾದರೂ ಬ್ರಹ್ಮಾಕುಮಾರ-ಕುಮಾರಿಯರು ಸಹೋದರ-ಸಹೋದರಿಯಾಗಿದ್ದೇರೆಂದು ಕೇಳುತ್ತಾರೆ, ಆಗ ಅವರ ಬುದ್ಧಿಯಲ್ಲಿ ಸ್ಪಷ್ಟ ಮಾಡಬೇಕಾಗುತ್ತದೆ, ಏಕೆಂದರೆ ಎಲ್ಲರ ಬುದ್ಧಿಯ ಬೀಗ ಹಾಕಲ್ಪಟ್ಟಿದೆ. ಕಲ್ಲು ಬುದ್ಧಿಯವರಾಗಿರುವ ಕಾರಣ ನೀವು ಅವರ ಬುದ್ಧಿಯನ್ನು ತೆರೆಯಬೇಕು. ಅನೇಕ ಸೇವಾಕೇಂದ್ರಗಳಲ್ಲಿ ಎಲ್ಲರೂ ತಮ್ಮನ್ನು ಬ್ರಹ್ಮಾಕುಮಾರ-ಕುಮಾರಿ ಎಂದು ಹೇಳಿಕೊಂಡಾಗ ಸಹೋದರ-ಸಹೋದರಿಯಾದರಲ್ಲವೆ. ಆಗ ದೇಹಾಭಿಮಾನದ ವಿಕಾರಿ ದೃಷ್ಟಿ ಇರುವುದು ಅಸಾಧ್ಯವಾದ ಮಾತಾಗುತ್ತದೆ. ಇದು ಈಶ್ವರನ ಹೊಸ ರಚನೆಯಾಗಿದೆ. ಆದರೆ ಅವರು ನಾವು ಈ ಮಾತುಗಳನ್ನು ಗೀತೆಯಲ್ಲಿ ಕೇಳಿರುವುದಿಲ್ಲ ಎಂದು ಹೇಳುತ್ತಾರೆ. ನಾನು ನಿಮಗೆ ಕಲಿಸಿಕೊಡುವಂತಹ ಯಾವ ಮಾತೂ ಸಹ ಉಳಿಯುವುದಿಲ್ಲ ಎಂದು ತಂದೆ ತಿಳಿಸುತ್ತಾರೆ, ಜ್ಞಾನ ಪ್ರಾಯಃಲೋಪವಾಗಿ ಬಿಡುತ್ತದೆ. ಮತ್ತೆ ನೀವು ಹೇಗೆ ಕೇಳುತ್ತೀರಿ? ಈಗ ನಾನು ನಿಮಗೆ ರಾಜಯೋಗವನ್ನು ಕಲಿಸುತ್ತಿದ್ದೇನೆ. ಯಾವಾಗ ರಾಜಧಾನಿ ಸ್ಥಾಪನೆಯಾಗುತ್ತದೆ, ಆಗ ಎಲ್ಲವೂ ಸಮಾಪ್ತಿಯಾಗುತ್ತದೆ. ಪಾಂಡವರು ರಾಜಧಾನಿಯನ್ನು ಸ್ಥಾಪನೆ ಮಾಡಿದರೆಂದು ಯಾವ ಶಾಸ್ತ್ರಗಳಲ್ಲಿಯೂ ಸಹ ಇಲ್ಲ. ದೇವತೆಗಳು ಪಾವನ ಪ್ರಪಂಚದ ಮಾಲೀಕರಾಗಿದ್ದರು, ದೈತ್ಯರು ಪತಿತ ಪ್ರಪಂಚದವರಾಗಿದ್ದಾರೆ. ಹಾಗಾದರೆ ಪರಸ್ಪರ ಇವರ ಯುದ್ಧ ಹೇಗೆ ನಡೆಯುತ್ತದೆ. ಸ್ವರ್ಗದಲ್ಲಿದ್ದವರು ನರಕದಲ್ಲಿ ಯುದ್ಧ ಮಾಡುವರೇನು! ಒಳ್ಳೆಯದು. ಹಾಗಾದರೆ ಅಸುರ ದೇವತೆಗಳ ಯುದ್ಧ ಯಾವಾಗ ನಡೆಯುತ್ತದೆ? ಅಗತ್ಯವಾಗಿ ಸಂಗಮಯುಗದಲ್ಲಿ ನಡೆದಿರಬೇಕು. ಅವರು ಅವರ ಸೈನ್ಯದೊಂದಿಗೆ ಬಂದು ಯುದ್ಧ ಮಾಡುವ ಮಾತಿನಲ್ಲಿ ಅರ್ಥಯಿರುವುದಿಲ್ಲ. ಎಲ್ಲಿ ಅಸುರರಿತ್ತಾರೆ, ಅಲ್ಲಿ ದೇವತೆಗಳಿರುವುದಿಲ್ಲ. ಎಲ್ಲಿ ದೇವತೆಗಳಿರುತ್ತಾರೆ, ಅಲ್ಲಿ ಅಸುರರಿರುವುದಿಲ್ಲ ಹಾಗಾದರೆ ಯುದ್ಧ ಹೇಗೆ ನಡೆಯುತ್ತದೆ! ಕೌರವ ಪಾಂಡವರಿಗೆ ಯುದ್ಧ ನಡೆಯಲು ಸಾಧ್ಯವೇಯಿಲ್ಲ. ಯಾರು ಶ್ರೀಮತದಂತೆ ನಡೆಯುತ್ತಾರೆ, ಅವರು ಎಂದೂ ಸಹ ಯಾರೊಂದಿಗೂ ಯುದ್ಧ ಮಾಡಿಸುವುದಿಲ್ಲ. ಯುದ್ಧ ಮಾಡಿಸುವವರು ಮನುಷ್ಯರಾಗಿರುತ್ತಾರೆ. ತಂದೆಯು ಯುದ್ಧ ಅಥವಾ ಜೂಜಾಟವನ್ನು ಆಡಲು ಅನುಮತಿ ಕೊಡುವುದಿಲ್ಲ. ಶ್ರೀಮತದಂತೆ ಜೂಜಾಡುತ್ತಾ, ಪರಸ್ಪರ ಯುದ್ಧ ಮಾಡುವಷ್ಟು

ಪಾಂಡವರು ಮೂರ್ಖರಾಗಿದ್ದರೇನು?

ಇದು ತಂದೆಯ ರುದ್ರ ಜ್ಞಾನ ಯಜ್ಞವೆಂದು ತಂದೆ ತಿಳಿಸಿದ್ದಾರೆ. ಇಲ್ಲಿ ಅಬಲಯರ ಮೇಲೆ ಅತ್ಯಾಚಾರ ಬಹಳ ನಡೆಯುತ್ತದೆ. ವಿಷಕ್ಕಾಗಿ ಎಷ್ಟೊಂದು ತೊಂದರೆ ಕೊಡುತ್ತಾರೆ. ಕಾಮ ಮಹಾಶತ್ರುವಾಗಿದೆ. ಇದರ ಮೇಲೆ ವಿಜಯಿಗಳಾಗುವುದರಿಂದ ನೀವು ಸ್ವರ್ಗದಲ್ಲಿ ಬರಬಹುದೆಂದು ತಂದೆ ತಿಳಿಸುತ್ತಿದ್ದಾರೆಂದು ಹೇಳಬೇಕು. ಈ ರೀತಿಯಾಗಿ ತಿಳಿಸಿಕೊಡುವುದರಿಂದ ನೀವು ವಿಜಯಿಗಳಾಗುತ್ತೀರಿ. ಪವಿತ್ರವಾಗಿರುವವರನ್ನು ದೇವೀ ಎಂದು ತಿಳಿದು ಪೂಜಿಸುತ್ತಾರೆ. ತಂದೆಯಿಂದ ಸಹಯೋಗವು ಸಿಗುತ್ತಿರುತ್ತದೆ. ಮನುಷ್ಯರು ಸ್ತ್ರೀ ಪುರುಷರು ಜೊತೆಯಲ್ಲಿದ್ದು ಪವಿತ್ರರಾಗಿರುವುದು ಅಸಾಧ್ಯವೆಂದು ಭಯ ಪಡುತ್ತಾರೆ. ಆದುದರಿಂದ ಇಲ್ಲಿ ಜಾದೂ ಇದೆ ಎಂದು ಹೇಳಿ ಬಿಡುತ್ತಾರೆ. ಇಂತಹ ಸತ್ಸಂಗಕ್ಕೆ ಎಂದಿಗೂ ಹೋಗಬಾರದು ಎಂದು ತಿಳಿದುಕೊಳ್ಳುತ್ತಾರೆ. ಯಜ್ಞದ ಆರಂಭದಲ್ಲಿ ಮಕ್ಕಳು ಎಲ್ಲವನ್ನು ಬಿಟ್ಟು ತಂದೆ ಬಳಿ ಬಂದಾಗ, ಆ ಹೆಸರು ಇದುವರೆಗು ಹಾಗೆಯೇ ಉಳಿದುಬಿಟ್ಟಿದೆ. ಭಟ್ಟಿಯಾದಾಗ ಅಗತ್ಯವಾಗಿ ಎಲ್ಲವನ್ನು ಬಿಟ್ಟು ಬಂದಿರಬೇಕಲ್ಲವೆ. ಬಂಧನದಲ್ಲಿರುವವರಿಗೆ ಬಹಳ ಸಲಹೆಗಳು ಸಿಗುತ್ತಿರುತ್ತವೆ. ಆದರೆ ಬಹಳ ಧೈರ್ಯ ಇರಬೇಕಾಗುತ್ತದೆ. ಬಡವರಂತು ಅಷ್ಟೊಂದು ಚಿಂತೆ ಮಾಡುವುದಿಲ್ಲ. ಈ ಕಾರಣದಿಂದ ನಾವು ಸ್ವರ್ಗದ ರಾಜ್ಯಭಾಗ್ಯವನ್ನು ಏಕೆ ಕಳೆದುಕೊಳ್ಳಲಿ ಎಂದು ತಿಳಿದುಕೊಳ್ಳುತ್ತಾರೆ. ಒಂದುವೇಳೆ ಮನೆಯಿಂದ ಹೊರಗೆ ಹಾಕಿದರೂ ಸಹ ನಾವು ಹೋಗಿ ಪಾತ್ರೆ ಸ್ವಚ್ಛ ಮಾಡುತ್ತೇವೆ, ಕಸ ಗುಡಿಸುತ್ತೇವೆ ಎಂಬ ನಿಶ್ಚಯವಿರುತ್ತದೆ. ಆದರೆ ಶ್ರೀಮಂತರು ಈ ರೀತಿ ಸುಲಭವಾಗಿ ಬಿಡುವುದಿಲ್ಲ. ಯಜ್ಞದ ಆರಂಭದಲ್ಲಿ ಮಕ್ಕಳ ಪಾತ್ರ ಆ ರೀತಿ ಇತ್ತು. ಇದು ಬಡವರಿಗೆ ಬಹಳ ಸಹಜವಾಗಿದೆ. ತಂದೆ ತಿಳಿಸುತ್ತಾರೆ-ತಂದೆ ಬಳಿ ಬಂದಾಗ ಮೊದಲು ಕಸ ತೆಗೆಯುವ ಕೆಲಸ ಮಾಡಬೇಕಾಗುತ್ತದೆ, ಆದರೆ ಮಕ್ಕಳು ಎಲ್ಲವನ್ನು ಮಾಡಬೇಕಾಗುತ್ತದೆ. ಮಾಯೆಯ ಬಿರುಗಾಳಿಯೂ ಸಹ ತೀವ್ರವಾಗಿ ಬರುತ್ತದೆ. ದೇಹಧಾರಿಗಳ ನೆನಪು ಬರುತ್ತಿರುತ್ತದೆ. ಆದುದರಿಂದ ಬಹಳ ಎಚ್ಚರಿಕೆಯಿಂದ ಇರಬೇಕು. ಮುಖ್ಯವಾಗಿ ನಷ್ಟೋಮೋಹಿಗಳಾಗಿರಬೇಕು. ಶಿವ ತಂದೆಯಂತೂ ನಮಗೆ ಎಲ್ಲಾ ರೀತಿಯಲ್ಲಿ ಸಲಹೆಯನ್ನು ಕೊಡುತ್ತಿರುತ್ತಾರೆ. ಜ್ಞಾನ ಪ್ರಾಪ್ತಿಯಾದ ನಂತರ ವಸ್ತ್ರ ಹೇಗಾದರೂ ಇರಲಿ ಚಿಂತೆ ಇರಬಾರದು. ತಂದೆ ನಿಮ್ಮನ್ನು ನಯನಗಳಮೇಲೆ ಕುಳ್ಳರಿಸಿಕೊಂಡು ಸ್ವರ್ಗದಲ್ಲಿ ಕರೆದುಕೊಂಡು ಹೋಗುತ್ತಾರೆ. ಪ್ರಿಯತಮನ ಹಿಂದೆ ಪ್ರಿಯತಮೆಯು ಹೋಗುವಾಗ ಮಡಿಕೆಯಲ್ಲಿ ಜ್ಯೋತಿಯನ್ನು ಬೆಳಗುತ್ತಾರೆ. ತಂದೆ ಬಂದು ನಮ್ಮೆಲ್ಲರನ್ನು ಹೂಗಳನ್ನಾಗಿ ಮಾಡಿ ಕರೆದುಕೊಂಡು ಹೋಗುವರು. ಎಲ್ಲರೂ ಪವಿತ್ರರಾಗಬೇಕಾಗುತ್ತದೆ. ತಲೆ ಮೇಲೆ ಇರುವ ಪಾಪದ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿಕೊಂಡು ಹೋಗಬೇಕು. ನೀವು ಬಹಳ ಶ್ರಮ ಪಡುತ್ತಿದ್ದೀರಿ. ಯಾರು ಶ್ರಮ ಪಡುವುದಿಲ್ಲ ಹಾಗೆಯೇ ಮುಕ್ತಿಯನ್ನು ಪಡೆಯಲು ಸಾಧ್ಯವಿಲ್ಲ. ವಿನಾಶದ ಸಮಯದಲ್ಲಿ ಬಹಳ ಶಿಕ್ಷೆಯನ್ನು ತಿಂದು ಮುಕ್ತಿಧಾಮದಲ್ಲಿ ಹೋಗುತ್ತಾರೆ. ಆತ್ಮದ ಸ್ವಧರ್ಮ ಶಾಂತಿಯಾಗಿದೆ, ಆದುದರಿಂದ ನಾವು ಅಶರೀರಿಯಾಗಿ ಕುಳಿತುಕೊಳ್ಳುತ್ತೇವೆ. ಈ ಕರ್ಮೇಂದ್ರಿಯಗಳಿಂದ ಯಾವ ಕರ್ಮವನ್ನು ಮಾಡದೆ ಶಾಂತಿಯಲ್ಲಿ ಕುಳಿತುಬಿಡುತ್ತಾರೆ. ಆದರೆ ಅದು ಎಲ್ಲಿಯವರೆಗೆ? ಕೊನೆಗೆ ಕರ್ಮದಲ್ಲಿ ಬರಬೇಕಾಗುತ್ತದೆ. ಸಾಧು ಸಂತ ಮೊದಲಾದವರು ಆತ್ಮನ ಸ್ವಧರ್ಮ ಶಾಂತಿ ಎನ್ನುವುದನ್ನು ತಿಳಿದುಕೊಂಡಿಲ್ಲ. ಸನ್ಯಾಸಿಗಳು ಶಾಂತಿಯನ್ನು ಹುಡುಕುತ್ತಿರುತ್ತಾರೆ. ಶಾಂತಿ ನಮ್ಮ ಕೊರಳಿನ ಹಾರವಾಗಿದೆ ಎಂದು ತಂದೆ ತಿಳಿಸುತ್ತಾರೆ. ಶಾಂತಿಗಾಗಿ ಕಾಡಿಗೆ ಏಕೆ ಹೋಗಬೇಕು! ನಾವು ಕರ್ಮ ಯೋಗಿಗಳಾಗಿದ್ದೇವೆ. ತಂದೆ ತಿಳಿಸುತ್ತಾರೆ-ನನ್ನನ್ನು ನೆನಪು ಮಾಡಿದಾಗ ವಿಕರ್ಮ ವಿನಾಶವಾಗುತ್ತದೆ. ನಂತರ ಸ್ವರ್ಗವನ್ನು ನೆನಪು ಮಾಡಬೇಕು, ಅರವತ್ತು ಮೂರು ಜನ್ಮಗಳು ಭಕ್ತಿಯಲ್ಲಿ ಬಂಧಿಸಿದ್ದ ನಿಮ್ಮನ್ನು ಈಗ ಎಲ್ಲಾ ಬಂಧನದಿಂದ ಬಿಡಿಸುತ್ತೇನೆ.

ತಂದೆಯ ಆದೇಶವಾಗಿದೆ ಈಗ ಅಶರೀರಿ ಆಗಿ, ಏಕೆಂದರೆ ನೀವು ನನ್ನ ಬಳಿಗೆ ಬಂದ ನಂತರ ನಿಮ್ಮನ್ನು ಸ್ವರ್ಗದಲ್ಲಿ ಕಳಿಹಿಸಿಕೊಡುತ್ತೇನೆ. ಇದರಲ್ಲಿ ಕಷ್ಟದ ಮಾತೇ ಇಲ್ಲ. ನೀವು ಭಕ್ತಿ ಮಾರ್ಗದಲ್ಲಿ ಎಷ್ಟೊಂದು ಮೋಸ ಹೋಗಬೇಕಾಯಿತು, ಪುನಃ ಮೋಸ ಹೋಗುತ್ತೀರಿ. ಏಕೆಂದರೆ ಎಲ್ಲರೂ ಪುನರ್ಜನ್ಮವನ್ನು ತೆಗೆದುಕೊಳ್ಳುತ್ತಾ ತಮೋಪ್ರಧಾನ ಆಗಲೇ ಬೇಕಾಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಹೆಜ್ಜೆ-ಹೆಜ್ಜೆಯಲ್ಲಿ ತುಂಬಾ ಎಚ್ಚರಿಕೆಯಿಂದ ನಡೆಯಬೇಕು. ಶ್ರೀಮತದಲ್ಲಿ ಎಂದಿಗೂ ಗೊಂದಲವಾಗಬಾರದು. ಎಂದಿಗೂ ಕುಲ ಕಳಂಕಿತರಾಗಬಾರದು.

2. ತಂದೆಯ ಸಮೀಪ ಹೋಗುವ ಸಲುವಾಗಿ ಎಲ್ಲಾ ಹಳೆಯ ಲೆಕ್ಕಾಚಾರವನ್ನು ಸಮಾಪ್ತಿ ಮಾಡಿಕೊಳ್ಳಬೇಕು. ಅಶರೀರಿ ಆಗುವ ಪೂರ್ತಿ ಅಭ್ಯಾಸ ಮಾಡಬೇಕು.

ವರದಾನ: ತಂದೆಯ ಸಮೀಪತೆಯ ಅನುಭವದ ಮೂಲಕ ಸ್ವಪ್ನದಲ್ಲಿಯೂ ವಿಜಯಿಯಾಗುವ ಸಮಾನ ಸಂಗಾತಿ ಭವ.

ಭಕ್ತಿಮಾರ್ಗದಲ್ಲಿ ಸಮೀಪವಿರಲು ಸತ್ಸಂಗದ ಮಹತ್ವಿಕೆಯನ್ನು ತಿಳಿಸುತ್ತಾರೆ. ಸಂಗ ಎಂದರೆ ಸಮೀಪ, ಯಾರು ಸಮಾನವಿರುತ್ತಾರೆಯೋ ಅವರೇ ಸಮೀಪವಿರಲು ಸಾಧ್ಯ. ಯಾರು ಸಂಕಲ್ಪದಲ್ಲಿಯೂ ಸದಾ ಜೊತೆಯಿರುತ್ತಾರೆಯೋ ಅವರಿಗೆ ಸಂಕಲ್ಪದಲ್ಲಿಯೇ ಅಲ್ಲ, ಸ್ವಪ್ನದಲ್ಲಿಯೂ ಮಾಯೆಯು ಯುದ್ಧ ಮಾಡಲು ಸಾಧ್ಯವಿಲ್ಲದೇ ಇರುವಷ್ಟು ವಿಜಯಿಯಾಗುತ್ತಾರೆ. ಸದಾ ಮಾಯಾಜೀತ ಅರ್ಥಾತ್ ಸದಾ ತಂದೆಯ ಸಮೀಪ ಸಂಗದಲ್ಲಿ ಇರುವವರು. ತಂದೆಯ ಸಂಗದಿಂದ ದೂರ ಮಾಡುವ ಶಕ್ತಿಯೂ ಸಹ ಯಾರಿಗೂ ಇರಲು ಸಾಧ್ಯವಿಲ್ಲ.

ಸ್ಲೋಗನ್: ಸದಾ ನಿರ್ವಿಘ್ನವಾಗಿರುವುದು ಹಾಗೂ ಸರ್ವರನ್ನು ನಿರ್ವಿಘ್ನರನ್ನಾಗಿ ಮಾಡುವುದು - ಇದೇ ಯಥಾರ್ಥವಾದ(ವಿಧಿಪೂರ್ವಕ) ಸೇವೆಯಾಗಿದೆ.

ಅಮೂಲ್ಯ ಜ್ಞಾನ ರತ್ನ - (ದಾದಿಯರ ಹಳೆಯ ಡೈರಿಯಿಂದ)

ತಮ್ಮ ನಿಶ್ಚಯದಲ್ಲಿ ಸ್ಥಿತರಾಗಿದ್ದು, ತಮ್ಮ ಕಲ್ಪದ ಮೊದಲಿನ ನೋಂದಣಿ ಮಾಡಿಕೊಳ್ಳಬೇಕಾಗಿದೆ. ನೋಂದಣಿಯನುಸಾರ ನಿಶ್ಚಯ ಮಾಡಿಕೊಳ್ಳಬೇಕಿಲ್ಲ. ಕೆಲವರು ತಿಳಿಯುತ್ತಾರೆ - ಈ ಜ್ಞಾನವಂತು ನನ್ನ ಭಾಗ್ಯದಲ್ಲಿಯೇ ಇಲ್ಲದಿರುವ ನೋಂದಣಿಯಾಗಿದೆ. ಆದರೆ ಇಲ್ಲ. ಅವಶ್ಯವಾಗಿ ಈ ನಿಶ್ಚಯವಿಡಬೇಕು - ನನ್ನ ಭಾಗ್ಯದಲ್ಲಿ ನೋಂದಣಿ ಆಗಿದೆ. ಪುರುಷಾರ್ಥ ಮಾಡುತ್ತಾ ನನ್ನ ಪ್ರಾಲಬ್ಧ ಮಾಡಿಕೊಳ್ಳಬೇಕು ಏಕೆಂದರೆ ವಿರಾಟ ನಾಟಕದನುಸಾರ ಮಾಡಲ್ಪಟ್ಟಿದೆ ಆದರೆ ಪುರುಷಾರ್ಥದಿಂದ ನೋಂದಣಿ ಆಗಿರುವುದನ್ನು ರೂಪಿಸಿಕೊಳ್ಳಬೇಕು. ಹೀಗೆ ಆಗಬೇಕೆಂದರೆ ನೋಂದಣಿಯ ಮಾಲೀಕರಾಗಿದ್ದು ಪುರುಷಾರ್ಥ ಮಾಡಬೇಕು. ಆಗಿರುವುದನ್ನು ನೋಡುತ್ತಾ ನಿಂತು ಬಿಡಬಾರದು ಆದರೆ ಪುರುಷಾರ್ಥದಿಂದ ಪ್ರಾಲಬ್ಧವೇನಾಯಿತು, ಅದು ಪ್ರಾಲಬ್ಧವೆಂದು ತಿಳಿಯುವುದೇ ಜ್ಞಾನವಾಗಿದೆ. ಬಾಕಿ ನೋಂದಣಿಯಾಗಿದೆ ಎಂದು ತಿಳಿದು ಪುರುಷಾರ್ಥ ಹೀನರಾಗುವುದು ಅಜ್ಞಾನವಾಗಿದೆ. ಒಳ್ಳೆಯದು. ಓಂ ಶಾಂತಿ.